## ತಪ್ಪಾಗಿ ಚಿತ್ರಣಗೊಂಡ ಮದುವೆ ಶಾಸ್ತ್ರ

ಸ್ಟಾರ್ ಸುವರ್ಣದ 'ಜಾನಕಿ ಸಂಸಾರ'ದಲ್ಲಿ ಸದಾಶಿವ ಕುಟುಂಬದ ಜಯರಾಂ ಅವರ ಎರಡನೆಯ ಮಗ ರಿಷಿ ಮದುವೆಯ ಸಮಯದಲ್ಲಿ ವರ ಹಸೆಮಣೆಗೆ ಬರುವುದಕ್ಕೂ ಮೊದಲೇ ವಧು ಅಲ್ಲಿ ಕುಳಿತಿರುತ್ತಾಳೆ. ಶಾಸ್ತ್ರದ ಪ್ರಕಾರ, ಕಾಶಿಯಾತ್ರೆ ಮುಗಿಸಿಕೊಂಡು ಮೊದಲು ವರ ಹಸೆಮಣೆಗೆ ಬರಬೇಕು. ನಂತರ ಗೌರಿ ಪೂಜೆ ಮುಗಿಸಿದ ವಧು ಹಸೆಗೆ ಬರಬೇಕು.

—ಕೆ.ಎಸ್. ಸವಿತಾ, ಬೆಂಗಳೂರು



## ಗಂಡಸೂ ಮನೆಗೆಲಸ ಮಾಡಲಿ...

ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮ ವಿಶೇಷ ಕಾರಣಗಳಿಂದ ಗಮನ ಸೆಳೆಯಿತು. ಕನ್ನಡ ಭಾಷೆ, ಸಾಹಿತ್ಯದ ಪ್ರಶ್ನೆಗಳು ಮಾತ್ರವಲ್ಲದೆ ನಿರೂಪಕ ಡಾ. ನಾ. ಸೋಮೇಶ್ವರ ಅವರು ಪ್ರೇಕ್ಷಕರಿಗೆ ಹಾಕಿದ ಪ್ರಶ್ನೆ ಅನಿರೀಕ್ಷಿತವಾಗಿತ್ತು. ಪ್ರತೀ ಗಂಡಸೂ ಒಂದು ದಿನವಾದರೂ ಸಂಪೂರ್ಣ ಮನೆಗೆಲಸ ಮಾಡಲೇಬೇಕು, ಆಗಷ್ಟೇ ಹೆಂಡತಿಯ ಪರಿಶ್ರಮ ಅರ್ಥವಾಗುತ್ತದೆ ಎಂದಿದ್ದರು. ಇದು ಪ್ರತಿಯೊಬ್ಬ ಮಹಿಳೆಯ ಮನದಲ್ಲೂ ಒಮ್ಮೆಯಾದರೂ ಸುಳಿದಿರಬಹುದಾದ ವಿಚಾರವೇ.

—ಸುಶೀಲಾ ಆರ್.ರಾವ್, ಉಡುಪಿ

ವಾರದ ಪತ್ರ

## ನಾನು ನಂದಿನಿ, ಕ್ರಿಕೆಟ್ ಆಡಾಕ ಬಂದೀನಿ

ನ್ಯೂಯಾರ್ಕ್‌ನಲ್ಲಿ ನಡೆದ ಕೆನಡ ಹಾಗೂ ಐರ್ಲೆಂಡ್ ಪಂದ್ಯವನ್ನು ಟೀವಿಯಲ್ಲಿ ಪತ್ನಿಯೊಂದಿಗೆ ವೀಕ್ಷಿಸುತ್ತಿದ್ದೆ. ಒಮ್ಮೆಲೇ ಪತ್ನಿ 'ನಮ್ಮ ನಂದಿನಿ' ಎಂದು ಉದ್ಗರಿಸಿದಳು. ಗಾಬರಿಯಿಂದ ನಾನು ಏನೆಂದು ಕೇಳಿದೆ, 'ನೋಡಿ ಅಲ್ಲಿ, ಐರ್ಲೆಂಡ್ ಆಟಗಾರರ ಪೋಷಾಕಿನಲ್ಲಿ ನಂದಿನಿ ಹಾಲಿನ ಜಾಹೀರಾತು! ಅದೂ ಕನ್ನಡದಲ್ಲಿ 'ನಂದಿನಿ' ಎಂದಿದೆ ಎಂದಳು. ಖುಷಿಯಾಯಿತು.

ಕರ್ನಾಟಕದಲ್ಲೇ ಇಂಗ್ಲಿಷ್ ಜಾಹೀರಾತು ಹೆಚ್ಚಿರುವಾಗ, ಅಪರೂಪಕ್ಕೆ ವಿದೇಶದಲ್ಲಿ ಕನ್ನಡ ಜಾಹೀರಾತು ಕಂಡು ಆನಂದ ಅನ್ನಿಸಿತು. (ಸ್ಕಾಟ್ಲೆಂಡ್ ಆಟಗಾರರೂ ಕನ್ನಡದ ನಂದಿನಿ ಲೋಗೊ ಬಳಸುವ ಒಪ್ಪಂದವಾಗಿದೆಯಂತೆ) ಇನ್ನು 'ನಾನು ನಂದಿನಿ... ಐರ್ಲೆಂಡ್, ಸ್ಕಾಟ್ಲೆಂಡ್ ಜೊತೆ ವಿಶ್ವಕಪ್‌ಗೆ ಬಂದೀನಿ' ಎಂದು ಟ್ರೆಂಡಿಂಗ್ ಹಾಡು ಬದಲಿಸಬಹುದೇನೋ?

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಲಕ್ಷ್ಮೀ ಬಾರಮ್ಮ, ಕಿವಿ ಕಾಪಾಡಮ್ಮ

ಕಲರ್ಸ್ ಕನ್ನಡದ 'ಲಕ್ಷ್ಮೀ ಬಾರಮ್ಮ' ಧಾರಾವಾಹಿಯ ಪಾತ್ರಧಾರಿಗಳು ಮೆಲು ಸಂಭಾಷಣೆಯನ್ನೂ ಕಿವಿಗಡಚಿಕ್ಕುವ ರೀತಿಯಲ್ಲಿ ಅರಚುವುದು ಏಕೋ?

ತನ್ನ ಪತಿಯ ಮೊದಲ ಪ್ರೇಯಸಿ ಯಾರು ಎಂಬುದನ್ನು ಸಾಕ್ಷಿ ಎದುರಿಗೇ ಇದ್ದರೂ ಅರಿಯದ ಪೆದ್ದು ನಾಯಕಿ, ತನ್ನನ್ನು ಮದುವೆಯಾಗು ಎಂದು ಬೆದರಿಸುವ ಮಾಜಿ ಪ್ರೇಯಸಿ, ಈರ್ವರ ನಡುವೆ ಅತ್ತ ಇತ್ತ ಓಲಾಡುವ ನಾಯಕ. ಮಗನ ಮೇಲಿನ ವ್ಯಾಮೋಹದಿಂದ ಕಾನೂನಿಗೆ ವಿರುದ್ಧವಾಗಿ ಮಗನಿಗೆ ಎರಡನೇ ಮದುವೆ ಮಾಡಿಸಲು ಮುಂದಾದ ತಾಯಿ. ಮಾತಿಲ್ಲದೇ ಗೊಂಬೆಯಂತೆ ನಿಲ್ಲುವ ಪುರುಷ ಪಾತ್ರಧಾರಿಗಳು ಅಬ್ಬಾ! ಹಾಗಾಗಿಯೇ ನೂರಾರು ಕಂತು ದಾಟಿದರೂ ಮೊದಲ ಒಂದು ವಾರದ ಕಥೆಯ ಸುತ್ತಾನೆ ಲಕ್ಷ್ಮಿ ಸುತ್ತುತ್ತಿದ್ದಾಳೆ!

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಸಾಮಾಜಿಕ ಜವಾಬ್ದಾರಿ ಬೇಡವೆ?

ಸುದ್ದಿ ವಾಹಿನಿಗಳಿಗೆ ರೋಚಕ ಸುದ್ದಿಗಳೇ ಗೋಚರವಾಗುತ್ತವೆ. ಆಗೊಂದಿಷ್ಟು ದಿನ ಪೆನ್‌ಡ್ರೈವ್‌ನಲ್ಲಿ ವೀಕ್ಷಕರನ್ನು ತಿವಿದಿದ್ದಾಯಿತು. ಮತ್ತೆರಡು ದಿನ ಡೈವೋರ್ಸ್ ಡ್ರೈವರ್ ಸೀಟಿಗೆ ಬಂದಿದೆ. ಈಗ ದರ್ಶನ್ ಸುದ್ದಿ. ಸಾಮಾನ್ಯರ ಬದುಕು, ಸಾಮಾಜಿಕ ಜವಾಬ್ದಾರಿ ಮರೆಯುವುದು ಯಾವಾಗ?

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಧಾರಾವಾಹಿಗಳು ಮನಸು ಅರಳುವಂತಿರಲಿ

ಕಿರುತೆರೆ ವಾಹಿನಿಗಳು ಸಮಾಜಮುಖಿಯಾಗಿ ಯೋಚಿಸುತ್ತಿಲ್ಲ ಎಂದರೆ ತಪ್ಪಾಗದು. ಕೆಲವು ವರ್ಷಗಳ ಹಿಂದೆ ದೂರದರ್ಶನದ ಕಾರ್ಯಕ್ರಮಗಳು ನೈಜ ಬದುಕು–ಸಂಸ್ಕೃತಿಗೆ ಒತ್ತುಕೊಟ್ಟು ರೂಪಿಸುತ್ತಿದ್ದವು. ಆ ಪರಂಪರೆ ಚಂದನದಲ್ಲಿಯೂ ಮುಂದುವರಿಯಿತು. ಆದರೆ ಇಂದಿನ ವಾಹಿನಿಗಳ ಬಹುತೇಕ ಧಾರಾವಾಹಿಗಳು ನೀರಸವಾದ ಅತ್ತೆ ಸೊಸೆ ಜಗಳದಲ್ಲಿಯೇ ದಿನದೂಡುತ್ತಿವೆ. ಅವು ಅಶಾಂತಿಯನ್ನು ಹರಡುವ, ನೆಮ್ಮದಿಯನ್ನು ಹಾಳುಮಾಡುವುದಕ್ಕೆ ಸೀಮಿತವಾಗದೆ, ಅರ್ಥಪೂರ್ಣ ಧಾರಾವಾಹಿಗಳ ಮೂಲಕ ಮನಸು ಅರಳುವಂತೆ ರೂಪಿಸಲಿ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

## ಸಿನಿಮಾಗಳ ಪ್ರಸಾರಕ್ಕೆ ಕೊಕ್ಕೆ

ಸಿನಿಮಾ ವಾಹಿನಿಗಳಿಗೆ ಮೀಸಲು ಎಂದು ಹಣೆಪಟ್ಟಿ ಹೊತ್ತ ಕೆಲವು ವಾಹಿನಿಗಳು ಈಚೆಗೆ ಸಿನಿಮಾಗಳನ್ನು ಬಿಟ್ಟು ಧಾರಾವಾಹಿಗಳನ್ನು ಮರುಪ್ರಸಾರ ಮಾಡಲು ಆರಂಭಿಸಿವೆ. ಹಾಗೂ ಹೀಗೂ ಒಂದು ಕನ್ನಡ ಚಿತ್ರ ಪ್ರಸಾರ ಆಗುತ್ತಿತ್ತು. ಅದಕ್ಕೂ ಈಗ ಕೊಕ್ಕೆ ಬಿದ್ದಂತೆ ಆಗಿದೆ. ಇತ್ತೀಚೆಗೆ ಚಿತ್ರರಂಗವೂ ಸ್ಟಾರ್ ನಟರ ಸಿನಿಮಾಗಳ ಕೊರತೆಯಿಂದ ಸೊರಗುತ್ತಿದೆ. ಟೀವಿಗಳು ಸಿನಿಮಾ ಪ್ರಸಾರ ಮಾಡಿ ಕನ್ನಡ ಚಿತ್ರರಂಗಕ್ಕೆ ತಮ್ಮದೇ ಆದ ಕಾಣಿಕೆ ನೀಡಿದ್ದಾರೆ ಎಂಬುದು ವ್ಯಂಗ್ಯ ಆದರೂ ಸತ್ಯ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಭಾಗ್ಯಾಳ ಛಲ-ಹೋರಾಟ ಅನುಕರಣೀಯ....

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ'ಯ ಭಾಗ್ಯಾಳ ಪಾತ್ರದ ಗುಣ ಪ್ರತಿಯೊಬ್ಬ ಮಹಿಳೆಯಲ್ಲೂ ಇರಬೇಕು ಎಂದೆನಿಸುತ್ತದೆ. ಕಾರಣಾಂತರಗಳಿಂದ ಮನೆಯ ಜವಾಬ್ದಾರಿಯನ್ನು ನಿಭಾಯಿಸಲು ಭಾಗ್ಯಾ ಮುಂದಾಗಿದ್ದಾಳೆ. ಆಕೆಗೆ ಸ್ಟಾರ್ ಹೋಟೆಲ್‌ನಲ್ಲಿ ಕೆಲಸ ಸಿಕ್ಕರೂ ಅಲ್ಲಿನ ಗ್ರಾಹಕರಿಗೆ ಸೇವೆ ಸಲ್ಲಿಸಲಾಗದೆ ಸೋಲುತ್ತಾಳೆ. ಆದರೂ ಅಂಜದೆ ಮುನ್ನುಗ್ಗುತ್ತಾಳೆ. ಅದು ಹೆಸರಿಗೆ ಸ್ಟಾರ್ ಹೋಟೆಲ್ ಆಗಿದ್ದರೂ ಪಕ್ಕದ ದರ್ಶಿನಿಯಿಂದ ತಂದು ಉಣಬಡಿಸುತ್ತಿದ್ದರು.

ಒಂದು ದಿನ ಆ ಹೋಟೆಲ್ ವಿಶೇಷ ಸವಿದು ಪತ್ರಿಕೆಯಲ್ಲಿ ಬರೆಯಲೆಂದು ಬಂದ ವಿಮರ್ಶಕನಿಗೆ ದರ್ಶಿನಿಯಿಂದ ತಿಂಡಿ ತರಲು ಆಗುವುದಿಲ್ಲ. ಆಗ ಭಾಗ್ಯಾ 'ಒತ್ತು ಶ್ಯಾವಿಗೆ ಮಾವಿನ ರಸಾಯನ' ಖ್ಯಾತ ವಿಮರ್ಶಕನಿಗೆ ಉಣಬಡಿಸಿದಳು. ನಂತರ ಭಾಗ್ಯಾಳಿಗೆ ಶೆಫ್ ಕೆಲಸ ನೀಡಲು ಫೈ ಸ್ಟಾರ್ ಹೋಟೆಲಿನ ಮ್ಯಾನೇಜರ್ ಮುಂದಾಗುತ್ತಾರೆ. ಆ ಸಂದರ್ಭದ ನಾಟಕೀಯ ಸನ್ನಿವೇಶ ತುಂಬ ಸೊಗಸಾಗಿ ಮೂಡಿಬಂದಿದೆ.

—ಅನುರಾಧ ಟಿ., ದಾವಣಗೆರೆ